ಒಂದೇ ಅಲ್ಲ. ಅದಿರಲಿ. ಸ್ವಲ್ಪ ಬೇರೆ ರೀತಿ ನಾನು ನೋಡಬಯಸುವೆ. ಕ್ರಿಶ್ಚಿಯಾನಿಟಿಯ ಪ್ರಭಾವ ಪಶ್ಚಿಮದಲ್ಲಿ ಗಾಢವಾಗಿದೆ. 'Resurrection' 'ಪುನರುತ್ಥಾನ'ದ ಪರಿಕಲ್ಪನೆ ಕ್ರಿಸ್ತ ಧರ್ಮದಲ್ಲಿ ಮುಖ್ಯ. ಪುನರುತ್ಥಾನದ ಪರಿಕಲ್ಪನೆಗೂ, ಜೀಸಸ್ ತನ್ನ 'ದೇಹ'ದಲ್ಲಿ ದುರ್ಭರವಾದ; ತಡೆಯಲಾಗದ, ಮಾರಣಾಂತಿಕವಾದ ನೋವನ್ನು



ಅನುಭವಿಸಿದುದಕ್ಕೂ ಹತ್ತಿರದ ಸಂಬಂಧ ಇದೆ. ಅದೆಂದರೆ – ಮೈ ತನಗಾಗುತ್ತಿರುವ ಅನುಭವಕ್ಕೆ ಇಡಿಯಾಗಿ ತನ್ನನ್ನು ಒಡ್ಡಿಕೊಂಡಾಗ, ಆಳದ ಆ ಅನುಭವವು ಮೈಯನ್ನು ಮೀರಿದ ಇನ್ನೊಂದು ನಿಜವಿದೆ ಎಂಬುದನ್ನು ತೋರಿಸಬಲ್ಲುದು. ಮೈಯ ಮೂಲಕವೇ ಮೈಯನ್ನು ಮೀರಿದ ಸತ್ಯದ ಹೊಳಹನ್ನು ಪಡೆಯುವುದು ಸಾಧ್ಯ. ಆ ಅರಿವನ್ನೇ 'ಪುನರುತ್ಥಾನ' ಎನ್ನುವುದು. ಮೈ ಎಲ್ಲ ಕಣ್ಣಾಗಿ ನೋಡಿದರು, ಮೈ ಎಲ್ಲ ಕಿವಿಯಾಗಿ ಕೇಳಿದರು ಎಂದು ಭಾಷೆಯಲ್ಲಿ ಪ್ರಯೋಗಗಳಿವೆಯಲ್ಲ! ಅದರಂತೆ ಮೈ ಎಲ್ಲ ಮನಸಾಗಬಲ್ಲುದು. ಅಂಥ ಮನಸ್ಸಿಗೆ ತಿಳಿಯಬಲ್ಲ ನಿಜವು, ಮೈ–ಮನಸ್ಸು ಎಂದು ವಿಂಗಡವಾಗಿ ಬದುಕಿರುವಾಗ– ಈಗ ನಾವು ಬದುಕಿರುವಂತೆ– ತಿಳಿಯುವ ನಿಜವಲ್ಲ. ಈ ನಿಜಕ್ಕಿಂತ ಅದು ಬೇರೆಯಾದದ್ದು. ಹಾಗೆಂದು ನಾವು ಈಗಾಗಲೇ ಮೈಯೇ ನಿಜವೆನ್ನುವಂತೆ ಬದುಕಿಲ್ಲವೆ ಎಂದರೆ ಇದು ಮೈಯ ಬಗೆಗಿನ ಆಸಕ್ತಿ, ಮೈಯನ್ನು ಕಾಪಾಡಿಕೊಳ್ಳುವ ತವಕವಲ್ಲದೆ ಬೇರೇನೂ ಅಲ್ಲ. ಯಾವ ರೀತಿಯಲ್ಲೂ ನೋವಾಗಬಾರದೆನ್ನುವ ಕಾಳಜಿ. ಇದು ಏಕಾಗ್ರತೆಯಲ್ಲ. ಏಕಾಗ್ರತೆಯಂತೆ ತೋರುವ ಆಸಕ್ತಿ. ಇದೇ ನಾಗರಿಕತೆಯ ಸಮಸ್ಯೆ. ಆದುದರಿಂದಲೇ ಮೈಯೆಲ್ಲ ಕಣ್ಣಾಗಿ ನೋಡಬೇಕಾದರೆ ಒಂದು ವಿಶೇಷ ಸಂದರ್ಭ ಬರಬೇಕು. ಮೈ–ಮನಸುಗಳ ವಿಂಗಡದ ಬದುಕಿನ ನಿಜಕ್ಕಿಂತ ಬೇರೆಯಾದ ಒಂದು ನಿಜ ಇದೆ– ಅದು ಇಲ್ಲೇ ಇದೆ– ಎಂದು ಸೂಚಿಸಲೆಂಬಂತೆ, ಬರಿಯ ಸೂಚನೆಯಲ್ಲ, ಉದಾಹರಣೆಯ ಮೂಲಕ ತೋರಿಸಲೆಂಬಂತೆ, ಕ್ರಿಸ್ತ ಭಗವಂತ ನೋವನ್ನು, ಮೈಯಲ್ಲಿ ಇಡಿಯಾಗಿ ಅನುಭವಿಸುವುದು ಹೇಗೆಂಬುದನ್ನು ಕಾಣಿಸಬೇಕಾಯಿತು!

ಪಶ್ಚಿಮದ ಶಿಲ್ಪಕಲೆ, ಚಿತ್ರಕಲೆಗಳ ಮೇಲೆ ಶಿಲುಬೆ ಏರಿದ ಕ್ರಿಸ್ತನ ದರ್ಶನದ ಪ್ರಭಾವ ಆಳವಾಗಿದೆ. ಮೈಕಲ್ ಏಂಜೆಲೋ, ಲಿಯೋನಾರ್ಡೋ ಡ ವಿನ್ಸಿ, ಮುಂತಾದ ಜಗದ್ವಿಖ್ಯಾತರ ಕೃತಿಗಳನ್ನು ನೋಡಬಹುದು. ಡ ವಿನ್ಸಿಯಂತೂ ಮರಣಾಸನ್ನ ಮನುಷ್ಯರು ಅನುಭವಿಸುವ ತೀವ್ರವಾದ ನೋವಿನಲ್ಲಿ ಅವರ ಮುಖ, ಮೈ ಹೇಗೆಲ್ಲ ಆಗುತ್ತದೆ ಎಂದು ತಿಳಿಯಲು ಅಂಥವರ ಬಳಿ ಕುಳಿತಿರುತ್ತಿದ್ದ. ಇಂಥ ಡವಿನ್ಸಿ 'ಮೊನಾಲಿಸಾ'ವನ್ನು ರಚಿಸಿದ. ಈ ಹಿನ್ನೆಲೆಯಲ್ಲಿ ನೋಡಿದ 'ಮೊನಾಲಿಸಾ' ಅವರ ಕಲೆಯು ಪಡೆದ ಪುನರುತ್ಥಾನವನ್ನು ತೋರಿಸುವ ಚಿತ್ರವಾಗಿದೆ!

ಒಂದು ವ್ಯತ್ಯಾಸವನ್ನು ಹೇಳುವೆ. ಎದ್ದು ಕಾಣುವ ವ್ಯತ್ಯಾಸ. ಬದುಕಿನಲ್ಲಿ ದುಃಖದ ನಿಜವನ್ನು ತೀವ್ರವಾಗಿ ಪ್ರತಿಪಾದಿಸಿದವನು ಬುದ್ಧ ಭಗವಂತ. ಆದರೆ, ಬುದ್ಧನ ಅಂದರೆ ಸಿದ್ಧಾರ್ಥನ ದುಃಖಾಕ್ರಾಂತ ಮುಖ ಕಲೆಯಲ್ಲಿ ಕಂಡರಿಸಲ್ಪಟ್ಟಿಲ್ಲ! ಎಲ್ಲೆಲ್ಲೂ ಬುದ್ಧನ